2) X – ಅಕ್ಷದ ಮೇಲಿನ ಬಿಂದುವಿನ ನಿರ್ದೇಶಾಂಕ ________ ರೂಪದಲ್ಲಿರುತ್ತದೆ.

A) ( x, 0)  B) (0, y)

C) (0, x)  D) (y , 0)

3) Y – ಅಕ್ಷದ ಮೇಲಿನ ಬಿಂದುವಿನ ನಿರ್ದೇಶಾಂಕ ________ ರೂಪದಲ್ಲಿರುತ್ತದೆ.

A) (x, 0)  B) (y, 0)

C) (0, y)  D) (0, x)

4) ಒಂದು ಕಾರ್ಟೀಷಿಯನ್ ಸಮತಲದಲ್ಲಿ Y – ಅಕ್ಷದಿಂದ ಯಾವುದೇ ಬಿಂದುವಿಗಿರುವ ದೂರವನ್ನು _______ ಎನ್ನುತ್ತೇವೆ.

A) X – ನಿರ್ದೇಶಾಂಕ  B) ಕ್ಷಿತಿಜ ದೂರ

C) Y – ನಿರ್ದೇಶಾಂಕ  D) (A) & (B) ಎರಡೂ

5) ಒಂದು ಕಾರ್ಟೀಷಿಯನ್ ಸಮತಲದಲ್ಲಿ X – ಅಕ್ಷದಿಂದ ಯಾವುದೇ ಬಿಂದುವಿಗಿರುವ ದೂರವನ್ನು ________ ಎನ್ನುತ್ತೇವೆ.

A) X – ನಿರ್ದೇಶಾಂಕ  B) Y – ನಿರ್ದೇಶಾಂಕ

C) ಲಂಬ ದೂರ  D) (B) & (C) ಎರಡೂ

6) ಒಂದು ಕಾರ್ಟೀಷಿಯನ್ ಸಮತಲದಲ್ಲಿ $P(x_1 , y_1 )$ ಮತ್ತು $Q(x_2 , y_2 )$ ಎಂಬ ಎರಡು ಬಿಂದುಗಳ ನಡುವಿನ ದೂರ _______________ ಆಗಿರುತ್ತದೆ.

A) $d = \sqrt{(x_2 - x_1)^2 + (y_2 - y_1)^2}$  B) $d = \sqrt{(x_2 - x_1)^2 - (y_2 - y_1)^2}$

C) $d = \sqrt{(x_2 - x_1)^2 \pm (y_2 - y_1)^2}$  D) $d = (x_2 - x_1)^2 + (y_2 - y_1)^2$

7) ಒಂದು ಕಾರ್ಟೀಷಿಯನ್ ಸಮತಲದಲ್ಲಿ ಮೂಲ ಬಿಂದು ಮತ್ತು $P(x , y )$ ಎಂಬ ಎರಡು ಬಿಂದುಗಳ ನಡುವಿನ ದೂರ _______________ ಆಗಿರುತ್ತದೆ.

A) $d = \sqrt{x^2 - y^2}$  B) $d = \sqrt{x^2 + y^2}$

C) $d = \sqrt{x^2 \pm y^2}$  D) $d = x^2 + y^2$

8) ಮೂಲಬಿಂದು ಹಾಗೂ (4, 3) ಬಿಂದುವಿಗೆ ಇರುವ ದೂರ ______

A) 9 ಮಾನಗಳು  B) 16 ಮಾನಗಳು

C) 25 ಮಾನಗಳು  D) 5 ಮಾನಗಳು

9) ಮೂಲಬಿಂದು ಹಾಗೂ (–2, –4) ಬಿಂದುವಿಗೆ ಇರುವ ದೂರ ________

A) $4\sqrt{5}$ ಮಾನಗಳು B) $2\sqrt{5}$ ಮಾನಗಳು

C) $10\sqrt{2}$ ಮಾನಗಳು D) 20 ಮಾನಗಳು

10) (10 , 5) ಹಾಗೂ (4, 13) ಬಿಂದುವಿಗೆ ಇರುವ ದೂರ ___________

A) 25 ಮಾನಗಳು B) 100 ಮಾನಗಳು

C) 10 ಮಾನಗಳು D) $\sqrt{10}$ ಮಾನಗಳು

11) A( $x_1$ , $y_1$) ಮತ್ತು B($x_2$ , $y_2$) ಈ ಬಿಂದುಗಳನ್ನು ಆಂತರಿಕವಾಗಿ $m_1 : m_2$ ಅನುಪಾತದಲ್ಲಿ ವಿಭಾಗಿಸುವ ಒಂದು ಬಿಂದುವಿನ ನಿರ್ದೇಶಾಂಕದ ಸೂತ್ರ ____________

A) $P(x, y) = \left(\frac{m_1 x_2 + m_2 x_1}{m_1 + m_2}, \frac{m_1 y_2 + m_2 y_1}{m_1 + m_2}\right)$ B) $P(x, y) = \left(\frac{m_1 x_1 + m_2 y_2}{m_1 + m_2}, \frac{m_1 y_1 + m_2 x_2}{m_1 + m_2}\right)$

C) $P(x, y) = \left(\frac{m_1 x_2 + m_2 x_1}{m_1 - m_2}, \frac{m_1 y_2 + m_2 y_1}{m_1 - m_2}\right)$ D) $P(x, y) = \left(\frac{m_1 x_2 - m_2 x_1}{m_1 + m_2}, \frac{m_1 y_2 - m_2 y_1}{m_1 + m_2}\right)$

12) P(5, 8) & Q(7 , 10) ಈ ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯಬಿಂದುವಿನ ನಿರ್ದೇಶಾಂಕ __________

A) ( 12 , 18) B) ( 12, 9 )

C) ( 6 , 18 ) D) ( 6 , 9 )

13) X (15, 8) & Y (3 , – 2) ಈ ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯಬಿಂದುವಿನ ನಿರ್ದೇಶಾಂಕ____.

A) ( 18 , 6) B) ( 9 , 3 )

C) ( 18 , 10 ) D) ( 9 , 5 )

14) ಒಂದು ಕಾರ್ಟೀಪಿಯನ್ ಸಮತಲದಲ್ಲಿ ತ್ರಿಭುಜದ ವಿಸ್ತೀರ್ಣ ಕಂಡುಹಿಡಿಯುವ ಸೂತ್ರ ___________

A) $\frac{1}{2}\left[x_1(y_2 - y_3) + x_2(y_3 - y_1) + x_3(y_1 - y_2)\right]$

B) $\frac{1}{2}\left[x_1(y_1 - y_1) + x_2(y_2 - y_2) + x_3(y_3 - y_3)\right]$

C) $\left[x_1(y_2 - y_3) + x_2(y_3 - y_1) + x_3(y_1 - y_2)\right]$

D) $\left[x_1(y_1 - y_1) + x_2(y_2 - y_2) + x_3(y_3 - y_3)\right]$

15) ಒಂದು ತ್ರಿಭುಜದ ವಿಸ್ತೀರ್ಣವು 0 ( ಸೊನ್ನೆ) ಮಾನಗಳಾಗಿದ್ದರೆ , ಅದರ ಶೃಂಗಬಿಂದುಗಳು ________

A) ಲಂಬವಾಗಿರುತ್ತವೆ B) ಸರಳರೇಖಾಗತವಾಗಿರುತ್ತವೆ.

C) ಒಂದೇ ಚತುರ್ಥಾಂಕದಲ್ಲಿರುತ್ತವೆ D) ಬೇರೆ - ಬೇರೆ ಚತುರ್ಥಾಂಕದಲ್ಲಿರುತ್ತವೆ

16) A(4, -6) ಮತ್ತು B(a, b) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯಬಿಂದುವು “ಮೂಲಬಿಂದು” ವಾದರೆ ‘a’ ಮತ್ತು ‘b’ ಗಳ ಬೆಲೆಗಳು _________

A) a = 4 ಮತ್ತು b = 6 B) a = -4 ಮತ್ತು b = -6

C) a = -4 ಮತ್ತು b = 6 D) a = 6 ಮತ್ತು b = 4

17) A( p, q ) ಮತ್ತು B(-5, 3 ) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯಬಿಂದುವು "ಮೂಲಬಿಂದು" ವಾದರೆ 'p' ಮತ್ತು 'q' ಗಳ ಬೆಲೆಗಳು _________

A) p = -5 ಮತ್ತು q = -3 B) p = -5 ಮತ್ತು q = 3

C) p = 3 ಮತ್ತು q = -5 D) p = 5 ಮತ್ತು q = -3

18) ಮೂಲಬಿಂದು ಮತ್ತು P( x , 15) ಬಿಂದುಗಳ ನಡುವಿನ ದೂರ 17 ಮಾನಗಳಾದರೆ ; 'x' ನ ಬೆಲೆ ______

A) $\pm 8$ B) 64

C) – 64 D) $\sqrt{-64}$

19) ಮೂಲಬಿಂದು ಮತ್ತು P( 5 , k) ಬಿಂದುಗಳ ನಡುವಿನ ದೂರ 13 ಮಾನಗಳಾದರೆ ; 'k' ನ ಬೆಲೆ ______

A) 12 B) – 12

C) (A) ಮಾತ್ರ D) (A) & (B) ಎರಡೂ

20) P (2 , -3 ) ಮತ್ತು Q ( 10 , y ) ಬಿಂದುಗಳ ನಡುವಿನ ದೂರ 10 ಮಾನಗಳಾದರೆ ; 'y' ನ ಬೆಲೆ _______

A) 9 ಅಥವ 3 B) – 9 ಅಥವ 3

C) 9 ಅಥವ –3 D) – 9 ಅಥವ –3

21) (–1 , 7 ) ಮತ್ತು ( 4 , –3 ) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು 2 : 3 ರ ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳು _________

A) ( 1 ,-3 ) B) ( -1 , 3 )

C) ( 1 , 3 ) D) ( 3 , 1 )

22) ( 7 , 6 ) ಮತ್ತು ( 3 , - 2 ) ಇವು ಒಂದು ವೃತ್ತದ ವ್ಯಾಸದ ಅಂತ್ಯ ಬಿಂದುಗಳಾದರೆ , ವೃತ್ತ ಕೇಂದ್ರದ ಬಿಂದುವಿನ ನಿರ್ದೇಶಾಂಕಗಳು _______

A) ( -5 , 2 ) B) ( 5 , 2 )

C) ( 10 , 4 ) D) ( 10 , 8 )

23) ( 7 , - 2 ) ; ( 5 , 1 ) ಮತ್ತು ( 3 , k ) ಈ ಬಿಂದುಗಳು ಸರಳರೇಖಾಗತವಾಗಿದ್ದರೆ ; k ನ ಬೆಲೆ _______

A) 2 B) 3

C) 4 D) 1

24) X ( 2 , 3 ) ; Y ( 4 , p ) ಮತ್ತು Z ( 6 , -3 ) ಈ ಬಿಂದುಗಳು ಸರಳರೇಖಾಗತವಾಗಿದ್ದರೆ ; p ನ ಬೆಲೆ _______

A) 3 B) 2

C) $\frac{1}{2}$ D) 0

25) A ( 1, 2) ; B ( 0 , 0) ಮತ್ತು C ( a , b) ಬಿಂದುಗಳು ಸರಳ ರೇಖಾಗತವಾಗಿದ್ದರೆ________

A) a = b B) b = 2a

C) a = 2b D) 1

26) P( 4, 3) ನಿರ್ದೇಶಾಂಕವು x – ಅಕ್ಷದಿಂದ ಇರುವ ದೂರ ______

A) 2 ಮಾನಗಳು B) 3 ಮಾನಗಳು

C) 4 ಮಾನಗಳು D) 5 ಮಾನಗಳು

27) ಪಕ್ಕದಲ್ಲಿ ನೀಡಿರುವ ನಕ್ಷೆಯಲ್ಲಿ "P" ಬಿಂದುವಿನ ನಿರ್ದೇಶಾಂಕ ____




A) ( 4 , 5 ) B) ( 5 , -4 )

C) ( 5 , 4 ) D) ( -5 , 4 )

28) ( 2 , -2 ) ಮತ್ತು ( -7 , 4 ) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು 1 : 2 ರ ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕ __________

A) ( 1 , 0 ) B) ( -1 , 0 )

C) ( 0 , 1 ) D) ( 0 , -1 )

29) ಪಕ್ಕದಲ್ಲಿ ನೀಡಿರುವ ನಕ್ಷೆಯನ್ನು ಗಮನಿಸಿ ,

P ಮತ್ತು Q ಬಿಂದುಗಳ ನಡುವಿನ ದೂರ ______




A) $\sqrt{34}$ ಮಾನಗಳು B) $\sqrt{36}$ ಮಾನಗಳು

C) 4 ಮಾನಗಳು D) $7\sqrt{2}$ ಮಾನಗಳು

30) ಪಕ್ಕದಲ್ಲಿ ನೀಡಿರುವ ನಕ್ಷೆಯನ್ನು ಗಮನಿಸಿ ,

M ಮತ್ತು N ಬಿಂದುಗಳ ನಡುವಿನ ದೂರ ______




A) $\sqrt{35}$ ಮಾನಗಳು B) $\sqrt{37}$ ಮಾನಗಳು

C) 37 ಮಾನಗಳು D) $7\sqrt{2}$ ಮಾನಗಳು

31) ಪಕ್ಕದಲ್ಲಿ ನೀಡಿರುವ ನಕ್ಷೆಯನ್ನು ಗಮನಿಸಿ ,

P ಮತ್ತು Q ಬಿಂದುಗಳ ನಡುವಿನ ದೂರ ______




A) 8 ಮಾನಗಳು B) $2\sqrt{5}$ ಮಾನಗಳು

C) 52 ಮಾನಗಳು D) $2\sqrt{2}$ ಮಾನಗಳು

32) ಪಕ್ಕದಲ್ಲಿ ನೀಡಿರುವ ನಕ್ಷೆಯನ್ನು ಗಮನಿಸಿ ,

F ಬಿಂದುವಿನಿಂದ Y – ಅಕ್ಷಕ್ಕೆ ಇರುವ ದೂರ _____

A) 2 ಮಾನಗಳು B) 4 ಮಾನಗಳು

C) $2\sqrt{5}$ ಮಾನಗಳು D) $2\sqrt{2}$ ಮಾನಗಳು




33) ಪಕ್ಕದಲ್ಲಿ ನೀಡಿರುವ ನಕ್ಷೆಯಲ್ಲಿ "H" ಬಿಂದುವಿನ

ನಿರ್ದೇಶಾಂಕವು ____

A) (-3 , -2 ) B) ( 3 , 2 )

C) ( -3 , 2 ) D) ( 3 , -2 )



# ಘಟಕ--- ವರ್ಗಸಮೀಕರಣಗಳು

1. ಮಿಶ್ರ ವರ್ಗಸಮೀಕರಣದ ಆದರ್ಶರೂಪವು........ಆಗಿದೆ.

A) $x^2+bx+c=0$ B) $ax^2-bx+c=0$

C) $ax^2+bx-c=0$ D) $ax^2+c-bx=0$

2. $2x^2-3=7x$ ವರ್ಗಸಮೀಕರಣದ ಆದರ್ಶರೂಪವು........ಆಗಿದೆ.

A) $2x^2-3=7x$ B) $2x^2-3-7x=0$

C) $2x^2-7x-3=0$ D) $-2x^2-3+7x=0$

3.ಕೆಳಗಿನ ಸಮೀಕರಣಗಳಲ್ಲಿ ಯಾವುದು ವರ್ಗಸಮೀಕರಣವಲ್ಲ?

A) $3x^2+4x-7=0$ B) $m^2-5m-8=0$

C) $2b^2+b-6=0$ D) $0x^2-2x-9=0$

4.ಕೆಳಗಿನ ಸಮೀಕರಣಗಳಲ್ಲಿ ಯಾವುದು ವರ್ಗಸಮೀಕರಣವಾಗಿದೆ?

A) $4x^{-2}-6x+6=0$ B) $3x-8y=1$

C) $5x^3+5x-7=0$ D) $3x^2+9=7$

5. $2x^2=4x-3$ ಎಂಬ ವರ್ಗಸಮೀಕರಣದ ಮಹತ್ತರ ಘಾತವು .............ಆಗಿದೆ

A) 1 B) 2

C) 3 D) 4

6. $7x^2-4x=5$ ಎಂಬ ವರ್ಗಸಮೀಕರಣದಲ್ಲಿನ ಸ್ಥಿರಾಂಕ ಪದವು ............ಆಗಿದೆ

A)7 B) -4

C) 5 D) -5

7. $x(x+1)+8=(x+2)(x-2)$ ಎಂಬುದು .........

A) ರೇಖಾತ್ಮಕ ಸಮೀಕರಣ B) ಘನ ಸಮೀಕರಣ

C) ವರ್ಗಸಮೀಕರಣ D) ಏಕಕಾಲಿಕ ಸಮೀಕರಣ

8. $ax^2+bx+c=0$ ಎಂಬ ವರ್ಗಸಮೀಕರಣದ ಸಂಖ್ಯಾ ಸಹಗುಣಕಗಳು............. ಆಗಿವೆ.

A) ಭಾಗಲಬ್ಧಸಂಖ್ಯೆಗಳು B) ಅಭಾಗಲಬ್ಧ ಸಂಖ್ಯೆಗಳು

C) ಪೂರ್ಣಾಂಕಗಳು D) ವಾಸ್ತವ ಸಂಖ್ಯೆಗಳು

9. $ax^2+bx=c$ ಎಂಬ ವರ್ಗಸಮೀಕರಣದ ವಾಸ್ತವ ಸಹಗುಣಕಗಳು ......, ....... ಹಾಗೂ.......ಆಗಿದೆ.

A) a,b,c B) a,-b,c

C) a,-b,-c D) a,b,-c

10. $3y^2=7y-2$ ಎಂಬ ಸಮೀಕರಣವನ್ನು ಸರಿದೂಗಿಸುವ y ನ ಬೆಲೆ.........ಆಗಿದೆ.

A)1 B) 3

C) 7 D)2

11.ಕೆಳಗಿನವುಗಳಲ್ಲಿನ ಯಾವ ಬೆಲೆಯು $x^2$-3x+2=0 ಸಮೀಕರಣವನ್ನು ಸರಿದೂಗಿಸುತ್ತದೆ ?

A) 1 B) 3

C) -1 D) -3

12. $ax^2$+bx+c=0 ಎಂಬ ವರ್ಗಸಮೀಕರಣವು ಹೊಂದಿರಬಹುದಾದ ಗರಿಷ್ಠ ಮೂಲಗಳ ಸಂಖ್ಯೆಯು ........ ಆಗಿರುತ್ತದೆ.

A)2 B) 3

C) 1 D) 4

13. $ax^2$+bx+c=0 ಎಂಬ ವರ್ಗಸಮೀಕರಣದ ಮೂಲಗಳನ್ನು ಕಂಡುಹಿಡಿಯಲು ಬಳಸುವ ಸೂತ್ರ ..............

A)$\frac{-b\pm\sqrt{b^2}-4ac}{2a}$ B)-b$\pm\frac{\sqrt{b^2-4ac}}{2a}$

C)$\frac{b\pm\sqrt{b^2-4ac}}{2a}$ D) $\frac{-b\pm\sqrt{b^2-4ac}}{2a}$

14. $x^2$+bx+c=0 ಎಂಬ ವರ್ಗಸಮೀಕರಣದ ಮೂಲಗಳನ್ನು................ ಪ್ರತಿನಿಧಿಸುವುದು.

A)$\frac{-b\pm\sqrt{b^2}-4ac}{2a}$ B) -b$\pm\frac{\sqrt{b^2-4ac}}{2a}$

C)$\frac{-b\pm\sqrt{b^2-4ac}}{2a}$ D) $\frac{-b\pm\sqrt{b^2-4c}}{2}$

15. (y-2) ಮತ್ತು (y+3) ಗಳು $y^2$+y-6 ನ ಅಪವರ್ತನಗಳಾಗಿದ್ದಾಗ $y^2$+y-6 =0 ಸಮೀಕರಣಗಳ ಮೂಲಗಳು ......ಮತ್ತು ..... ಆಗಿವೆ

A) -2+3 B) 2,-3

C)-2,-3 D) 2,3

16. (x-1) ಎಂಬುದು $x^2$+px-3ನ ಅಪವರ್ತನವಾಗಿದ್ದಾಗ $x^2$+px-3=0 ಎಂಬ ವರ್ಗಸಮೀಕರಣದಲ್ಲಿ p ನ ಬೆಲೆಯು ...........ಆಗಿರುತ್ತದೆ.

A) 2 B) -2

C) 3 D)-5

17. $m^2$+m-12=0 ಎಂಬ ವರ್ಗಸಮೀಕರಣದ ಮೂಲಗಳು ....... ಮತ್ತು.......ಆಗಿವೆ

A) 4, 3 B) 4,-3

C) -4,-3 D) -4,3

18. x ನ ಯಾವ ಬೆಲೆಗಳು $6x^2$-x-2=0 ವರ್ಗಸಮೀಕರಣವನ್ನು ಸರಿದೂಗಿಸುತ್ತವೆ?

A) $\frac{2}{3},\frac{1}{2}$ B)$\frac{-2}{3},\frac{1}{2}$

C)$\frac{2}{3},\frac{-1}{2}$ D)$\frac{-2}{3},\frac{-1}{2}$

19. $x^2$+px+12=0 ಎಂಬ ವರ್ಗಸಮೀಕರಣದ ಒಂದು ಮೂಲವು 4 ಆಗಿದ್ದಾಗ P ನ ಬೆಲೆಯು ............

A) -7 B) +7

C) -5 D) +5

20 ಕೆಳಗಿನ ಯಾವ ವರ್ಗಸಮೀಕರಣವು -2 ಮತ್ತು +5 ಗಳನ್ನು ಮೂಲಗಳನ್ನಾಗಿ ಹೊಂದಿದೆ ?

A) $x^2-3x-10=0$ B) $x^2+3x-10=0$

C) $x^2-3x+10=0$ D) $x^2+3x+10=0$

21. $b^2 - 4ac$ ನ್ನು $ax^2+bx+c=0$ ದ ವರ್ಗಸಮೀಕರಣದ ಶೋಧಕ ಎಂದು ಕರೆಯುತ್ತೇವೆ,ಕಾರಣವೆನೆಂದರೆ......

A) $b^2 - 4ac$ ನ ಬೆಲೆಯು ವರ್ಗಸಮೀಕರಣದ ಮೂಲಗಳ ಸ್ವಭಾವವನ್ನು ವಿವರಿಸುತ್ತದೆ.

B) $b^2 - 4ac$ ನ ಬೆಲೆಯು ವರ್ಗಸಮೀಕರಣದ ಮೂಲಗಳನ್ನು ನೀಡುತ್ತದೆ.

C) $b^2 - 4ac$ ನ ಬೆಲೆಯು ವರ್ಗಸಮೀಕರಣದ ಮೂಲಗಳ ವಿಧವನ್ನು ವಿವರಿಸುತ್ತದೆ.

D) $b^2 - 4ac$ ನ ಬೆಲೆಯು ವರ್ಗಸಮೀಕರಣದ ಮೂಲಗಳನ್ನು ವಿಭೇದಿಸುತ್ತದೆ.

22. $ax^2+bx+c=0$,ಎಂಬ ವರ್ಗಸಮೀಕರಣದಲ್ಲಿ $c=0$ ಆಗಿದ್ದಾಗ ಮೂಲಗಳು ....... ಮತ್ತು ..........ಆಗಿವೆ.

A) 0, $\frac{-b}{a}$ B) 0, $\frac{b}{a}$

C) a, $\frac{-b}{a}$ D) b, $\frac{-b}{a}$

23.ಕೆಳಗಿನ ಯಾವ ನಿರ್ಬಂಧದಲ್ಲಿ $ax^2+bx+c=0$ ವರ್ಗಸಮೀಕರಣದ ಮೂಲಗಳು ವಾಸ್ತವ, ಭಾಗಲಬ್ಧ ಮತ್ತು ಭಿನ್ನವಾಗಿರುತ್ತವೆ.

A) $b^2 - 4ac = 0$ B) $b^2 - 4ac > 0$ ಮತ್ತು ಪೂರ್ಣವರ್ಗಸಂಖ್ಯೆ

C) $b^2 - 4ac < 0$ D) $b^2 - 4ac > 0$ ಮತ್ತು ಅಪೂರ್ಣವರ್ಗಸಂಖ್ಯೆ

24. $ax^2+bx+c=0$ ವರ್ಗಸಮೀಕರಣದಲ್ಲಿ $b^2 - 4ac < 0$ ಆಗಿದ್ದಾಗ ಮೂಲಗಳ ಸ್ವಭಾವು.......ಆಗಿರುತ್ತದೆ.

A) ಭಾಗಲಬ್ಧಸಂಖ್ಯೆ ಮತ್ತು ಸಮ B) ಭಾಗಲಬ್ಧಸಂಖ್ಯೆ ಮತ್ತು ಅಸಮ

C) ಅಭಾಗಲಬ್ಧಸಂಖ್ಯೆ ಮತ್ತು ಅಸಮ D) ಅವಾಸ್ತವ ಸಂಖ್ಯೆ ಮತ್ತು ಊಹಾತ್ಮಕ

25. ಶೋಧಕದ ಯಾವ ನಿರ್ಬಂಧದಲ್ಲಿ$ax^2+bx+c=0$, ವರ್ಗಸಮೀಕರಣದ ಮೂಲಗಳು ಅಭಾಗಲಬ್ಧ ಸಂಖ್ಯೆ ಮತ್ತು ಅಸಮವಾಗಿರುತ್ತವೆ.

A) $b^2 - 4ac =0$ B) $b^2 - 4ac >0$ ಮತ್ತು ಪೂರ್ಣವರ್ಗಸಂಖ್ಯೆ

C) $b^2 - 4ac <0$ D) $b^2 - 4ac >0$ ಮತ್ತು ಅಪೂರ್ಣವರ್ಗಸಂಖ್ಯೆ

26. $p^2-4qr$ ನ್ನು ಶೋಧಕವನ್ನಾಗಿ ಹೊಂದಿರುವ ವರ್ಗಸಮೀಕರಣವು ......ಆಗಿರುತ್ತದೆ.

A) $px^2+qx+r = 0$ B) $qx^2+px+r=0$

C) $px^2+rx+q = 0$ D) $rx^2+qx+p=0$

27. $ax^2+c =-bx$ ಎಂಬ ವರ್ಗಸಮೀಕರಣದ ಶೋಧಕದ ಬೆಲೆಯು ಶೂನ್ಯವಾಗಿದ್ದಾಗ ಅದರ ಮೂಲವು ......ಆಗಿದೆ.

A) $\frac{-b}{a}$ B) $\frac{-b}{2a}$

C) $\frac{b}{a}$ D) $\frac{b}{2a}$

28. $2x^2 = 4x-3$ ಎಂಬ ವರ್ಗಸಮೀಕರಣದ ಶೋಧಕದ ಬೆಲೆಯು ......... ಆಗಿರುತ್ತದೆ.

A) -8 B) 8

C) 40 D) -40

29. $2x^2 = 4x-3$ ಎಂಬ ವರ್ಗಸಮೀಕರಣದ ಮೂಲಗಳು......ಆಗಿರುತ್ತದೆ.

A) ಭಾಗಲಬ್ಧಸಂಖ್ಯೆ B)ಅಭಾಗಲಬ್ಧಸಂಖ್ಯೆ

C) ವಾಸ್ತವ ಸಂಖ್ಯೆ D) ಊಹಾತ್ಮಕ ಸಂಖ್ಯೆ

30. ಒಂದು ವರ್ಗಸಮೀಕರಣದ ಮೂಲಗಳು 4 ಮತ್ತು ½ ಆಗಿದ್ದಾಗ ಆ ವರ್ಗಸಮೀಕರಣದ ಶೋಧಕವು ............. ಆಗಿರುತ್ತದೆ.

A) ಶೂನ್ಯ B) ಧನಾತ್ಮಕ ಸಂಖ್ಯೆ

C) ಋಣಾತ್ಮಕ ಸಂಖ್ಯೆ D) ಯಾವುದೂ ಅಲ್ಲ

31. $9x^2+kx+4=0$ ಎಂಬ ವರ್ಗಸಮೀಕರಣವು ಸಮ ಮೂಲಗಳನ್ನು ಹೊಂದಿದ್ದಾಗ K ನ ಬೆಲೆಯು ......ಆಗಿರುತ್ತದೆ.

A) ±12 B) ±13

C) ±11 D) ±1

32. ಒಂದು ವರ್ಗಸಮೀಕರಣದ ಶೋಧಕದ ಬೆಲೆಯು 11 ಆಗಿದ್ದಾಗ ಆ ವರ್ಗಸಮೀಕರಣದ ಮೂಲಗಳು ........... ಮತ್ತು ........... ಆಗಿರುತ್ತದೆ.

A) ಭಾಗಲಬ್ಧಸಂಖ್ಯೆ ಮತ್ತು ಅಸಮ B) ಭಾಗಲಬ್ಧಸಂಖ್ಯೆ ಮತ್ತು ಸಮ

C) ಅಭಾಗಲಬ್ಧಸಂಖ್ಯೆ ಮತ್ತು ಅಸಮ D) ಅಭಾಗಲಬ್ಧಸಂಖ್ಯೆ ಮತ್ತು ಸಮ

33. ಒಂದು ವರ್ಗಸಮೀಕರಣದ ಶೋಧಕದ ಬೆಲೆಯು ಒಂದು ಪೂರ್ಣವರ್ಗವಾಗಿದ್ದಾಗ ಆ ವರ್ಗಸಮೀಕರಣದ ಮೂಲಗಳು ............... ಆಗಿರುತ್ತದೆ.

A) ವಾಸ್ತವ ಸಂಖ್ಯೆ B) ಭಾಗಲಬ್ಧಸಂಖ್ಯೆ

C) ಅಸಮ D) ಕೊಟ್ಟಿರುವ ಎಲ್ಲವೂ

34 . ಒಂದು ವರ್ಗಸಮೀಕರಣದ ಶೋಧಕದ ಬೆಲೆಯು ಶೂನ್ಯವಾಗಿದ್ದಾಗ ಅದರ ಮೂಲಗಳು...........ಆಗಿರುತ್ತವೆ.

A) ವಾಸ್ತವ ಸಂಖ್ಯೆ ಮತ್ತು ಭಿನ್ನ B) ಭಾಗಲಬ್ಧಸಂಖ್ಯೆ ಮತ್ತು ಭಿನ್ನ

C) ವಾಸ್ತವ ಸಂಖ್ಯೆ ಮತ್ತು ಸಮ D) ಅಭಾಗಲಬ್ಧಸಂಖ್ಯೆ ಮತ್ತು ಭಿನ್ನ

35..$4x^2+2x+8=0$ ಎಂಬ ವರ್ಗಸಮೀಕರಣದ ಪರಿಹಾರಗಳ ಸ್ವಭಾವವು.......... ಮತ್ತು...........ಆಗಿರುತ್ತದೆ.

A) ವಾಸ್ತವ ಸಂಖ್ಯೆ ಮತ್ತು ಭಿನ್ನ B) ಅವಾಸ್ತವ ಸಂಖ್ಯೆ ಮತ್ತು ಭಿನ್ನ

C) ವಾಸ್ತವ ಸಂಖ್ಯೆ ಮತ್ತು ಸಮ D) ಅಭಾಗಲಬ್ಧಸಂಖ್ಯೆ ಮತ್ತು ಭಿನ್ನ

36. $3x^2+8x-2=0$ ಎಂಬ ವರ್ಗಸಮೀಕರಣದ ಶೋಧಕದ ಬೆಲೆಯು........... ಆಗಿದೆ

A) 40 B)68

C)88 D)30

37. $x^2+bx+c=o$ ಎಂಬ ವರ್ಗಸಮೀಕರಣದ ಶೋಧಕದ ಬೆಲೆಯು....... ಆಗಿದೆ.

A) $b^2 - 4ac$　　B) $b^2 - 4ac$

C) $b - 4ac$　　D) $b^2 - 4a$

38. $ax^2+bx+c=0$, ಎಂಬ ವರ್ಗಸಮೀಕರಣದಲ್ಲಿ $b^2 - 4ac > 0$ ಆದಾಗ ವರ್ಗಸಮೀಕರಣದ ಮೂಲಗಳ ಸ್ವಭಾವವು ................ ಆಗಿರುತ್ತದೆ.

A) ವಾಸ್ತವ ಸಂಖ್ಯೆ ಮತ್ತು ಭಿನ್ನ　　B) ಭಾಗಲಬ್ಧಸಂಖ್ಯೆ ಮತ್ತು ಭಿನ್ನ

C) ಅಭಾಗಲಬ್ಧಸಂಖ್ಯೆ ಮತ್ತು ಭಿನ್ನ　　D) ಕೊಟ್ಟಿರುವ ಎಲ್ಲವೂ

39. $ax^2+bx+c=0$ ಎಂಬ ವರ್ಗಸಮೀಕರಣದ ಮೂಲಗಳು ಭಿನ್ನವಲ್ಲದೆ ಇದ್ದಾಗ ಕೆಳಗಿನ ಯಾವುದು ಸರಿಯಾಗಿದೆ?

A) $b^2 - 4ac > 0$　　B) $b^2 - 4ac < 0$

C) $b^2 - 4ac = 0$　　D) ಕೊಟ್ಟಿರುವ ಎಲ್ಲವೂ

40. $ax^2+bx+c=0$, ಎಂಬ ವರ್ಗಸಮೀಕರಣದಲ್ಲಿ $b^2 - 4ac = 0$ ಆದಾಗ ವರ್ಗಸಮೀಕರಣದ ಮೂಲಗಳು ............ಆಗಿರುತ್ತವೆ.

A) ವಾಸ್ತವ ಸಂಖ್ಯೆ　　B) ಭಾಗಲಬ್ಧಸಂಖ್ಯೆ

C) ಸಮ　　D) ಕೊಟ್ಟಿರುವ ಎಲ್ಲವೂ

# ಘಟಕ---ತ್ರಿಕೋನಮಿತಿ

1. sin$\theta$ = ------------

A) $\frac{\text{ಪಾರ್ಶ}}{\text{ವಿಕರ್ಣ}}$ B) $\frac{\text{ಅಭಿಮುಖ}}{\text{ವಿಕರ್ಣ}}$

C) $\frac{\text{ಅಭಿಮುಖ}}{\text{ಪಾರ್ಶ}}$ D) $\frac{\text{ಪಾರ್ಶ}}{\text{ಅಭಿಮುಖ}}$

2. 13cos$\theta$ = 5 ಆದರೆ tan$\theta$ = ----------

A) $\frac{5}{13}$ B) $\frac{13}{5}$

C) $\frac{5}{12}$ D) $\frac{12}{5}$

3. cosec$\theta$ = $\frac{13}{5}$ ಆದರೆ $\frac{5}{13}$ = --------------

A) sin$\theta$ B) cos$\theta$

C) tan$\theta$ D)sec$\theta$

4. tan$\theta$ = $\frac{3}{4}$ ಆದರೆ sin$\theta$+cos$\theta$ ----------

A) $\frac{9}{5}$ B) $\frac{5}{7}$

C) $\frac{5}{9}$ D) $\frac{7}{5}$

5. sec$\theta$ ದ ವಿಲೋಮ ------------

A) sin$\theta$ B) cos$\theta$

C) tan$\theta$ D)cosec$\theta$

6. sin$45^0$ = --------------

A) $\frac{1}{2}$ B) $\frac{1}{\sqrt{2}}$

C) $\sqrt{2}$ D) 2

7. sin$30^0$ ಸಮನಾದುದು ---------

A) cos$60^0$ B) cos$30^0$

C) sin$60^0$ D) tan$30^0$

8. sin$30^0$+cos$60^0$ = -----------

A) $\frac{1}{2}$ B) 1

C) $\frac{1}{4}$ D) 2

9. $\frac{tan65^0}{cot25^0}$ =----------

A) $\sqrt{2}$ B)0

C) 1 D) $\frac{1}{\sqrt{2}}$

10. $\cos48^0 - \sin42^0$ ಇದರ ಬೆಲೆ ------------

A) $\frac{1}{2}$ B)0

C)1 D) $\frac{1}{\sqrt{2}}$

11. $cos^2 17^0 - sin^2 73^0$ ಇದರ ಬೆಲೆ -------------

A) 1 B) $\frac{1}{3}$

C)0 D)-1

12. $\frac{cos\ 37^0}{sin\ 53^0}$ = ---------------

A)0 B)1

C)2 D)3

13. . $\frac{cosec32^0}{sec58^0}$ = -------

A) 1 B) 0

C) $\frac{1}{2}$ D) 2

14. $\sin(90-20)^0$ ಯ ಬೆಲೆ---------

A) $\sin20^0$ B) $\cos20^0$

C)$\cos70^0$ D)$\sin90^0$

13. cosec$\theta$ ದ ಪೂರಕ ಕೋನ ------------

A) cos $\theta$ B) sin $\theta$

C) cosec $\theta$ D) sec $\theta$

14. $cos^2 17^0 - sin^2 73^0$ ಇದರ ಬೆಲೆ ---------

A) 0 B) 1

C)2 D)3

15. ತ್ರಿಭುಜ ABC ಯಲ್ಲಿ ಕೋನ B ಯು ಲಂಬಕೋನವಾಗಿದೆ C ಯು $\theta$ ಆದರೆ sin(90-$\theta$) = ________

A) $\frac{AB}{AC}$ B) $\frac{BC}{AC}$

C) $\frac{BC}{AB}$ D) $\frac{AB}{Bc}$

16. ಕೆಳಗಿನವುಗಳಲ್ಲಿ ಯಾವುದು ಸರಿಯಾದುದಲ್ಲ---------------

A) $sin^2\theta^0+cos^2\theta^0$=1 B) sin$\theta$=$\sqrt{1-cos^2}\theta$

C) sin$\theta$=$\sqrt{1+cos^2}\theta$ D) cos$\theta$=$\sqrt{1-sin^2}\theta$

17. $sin^2\theta^0+cos^2\theta^0$ = 1 ನ್ನು $sin^2\theta^0$ ದಿಂದ ಭಾಗಿಸಿದಾಗ -----------

A) 1+$cot^2\theta^0 = cosec^2\theta^0$ B) 1+$tan^2\theta^0 = sec^2\theta^0$

C) $cot^2\theta^0 + tan^2\theta^0$ = 1 D) $cot^2\theta^0 - tan^2\theta^0$ = 1

18. $sin^2\theta^0$+$cos^2\theta^0$=1ನ್ನು $cos^2\theta^0$ ದಿಂದ ಭಾಗಿಸಿದಾಗ --------

A) 1+$cot^2\theta^0$ = $cosec^2\theta^0$ B) 1+$tan^2\theta^0$ = $sec^2\theta^0$

C) $cot^2\theta^0 + tan^2\theta^0$ = 1 D) $cot^2\theta^0 - tan^2\theta^0$ = 1

19.( $sin\theta + cos\theta)^2$ =------------------

A) 1+2sin$\theta cos\theta$ B) 1−2sin$\theta cos\theta$

C) 1+sin$\theta cos\theta$ D) 1−sin$\theta cos\theta$

20.3tan$\theta$ =$\sqrt{3}$ ಆದಾಗ $\theta$ = --------

A) $45^0$ B) $30^0$

C) $60^0$ D) $90^0$

21. $sin^2 60^0$=---------

A) $\frac{3}{4}$ B) $\frac{4}{3}$

C) $\frac{\sqrt{3}}{2}$ D) $\frac{2}{\sqrt{3}}$

22. cosec$60^0$ = --------

A)sin$60^0$ B)sec $60^0$

C)sec $30^0$ D)cos$30^0$

23. $sin^2 45^0$ x $cos^2 45^0$ = ----------

A) $\frac{1}{4}$ B) $\frac{1}{2}$

C) $\frac{1}{\sqrt{2}}$ D) 4

24. sec4A =cosec(A-$20^0$) ಮತ್ತು 4A ಲಘುಕೋನವಾದಾಗ A= -------

A) $32^0$ B) $70^0$

C) $22^0$ D) $42^0$

25. sin$20^0$sec$70^0$ + cos$25^0$cosec$65^0$=-------------

A)0 B)1

C)4 D) 2

26. ಕೆಳಗಿನ ಯಾವುದು ಒಂದಕ್ಕೊಂದು ಪೂರಕ ಹಾಗೂ ವಿಲೋಮವು ಆಗಿರುವುದು.

A) tan$\theta$ ಮತ್ತು cot$\theta$ B) sin$\theta$ ಮತ್ತು cos$\theta$

C) sin$\theta$ ಮತ್ತು cosec$\theta$ D) sec$\theta$ ಮತ್ತು cosec$\theta$

27) $\frac{1+tan^2A^0}{1+cot^2A^0}$ = ----

A) $sec^2A^0$ B) $cosec^2A^0$

C) $tan^2A^0$ D) $cot^2A^0$

28) $9sec^2A^0 - 9tan^2A^0 = ---$

A) 9 B) 0

C) 1 D)-9

29. $\frac{1+tan^2 45^0}{1-cot^2 45^0}$=-----------

A) 0 B) N.D.

C) 1 D) 2

30. Sin2A=2sinA, A ನ ಯಾವ ಬೆಲೆಗೆ ಇದು ಸರಿ ? --------

A) $0^0$ B) $35^0$

C) $45^0$ D) $60^0$

# ಘಟಕ---ತ್ರಿಕೋನಮಿತಿಯ ಅನ್ವಯಗಳು




1. ಈ ಚಿತ್ರದಲ್ಲಿ AB ಮತ್ತು BC=10 ಆದಾಗ $\theta$ ದ ಬೆಲೆ

A) $30^0$ B) $45^0$

C) $60^0$ D) $90^0$

2. ಒಂದು ಟವರ್ ನ ಎತ್ತರ 10ಮೀ. ಅದು ನೆರಳಿನೊಂದಿಗೆ $45^0$ ಅವನತ ಕೋನವನ್ನು ಉಂಟುಮಾಡಿದಾಗ, ಅದರ ನೆರಳಿನ ಉದ್ದ________

A) 10m. B) 5m

C)15m D)20m

3. ಒಂದು ಟವರ್ ಮತ್ತು ಅದರ ನೆರಳಿನ ಉದ್ದಗಳ ಅನುಪಾತ $\sqrt{3}$ :1 ಆದಾಗ ಉನ್ನತಕೋನವು ಎಷ್ಟಿರುತ್ತದೆ?

A)$30^0$ B) $45^0$

C) $60^0$ D) $90^0$

4. ಒಂದು ಏಣಿಯು 20ಮೀ. ಉದ್ದವಿದೆ. ಅದನ್ನು 10ಮೀ. ಎತ್ತರದಲ್ಲಿ ಗೋಡೆಯನ್ನು ತಾಕುವಂತೆ ಇಟ್ಟಿದೆ. ಅದು ನೆಲದೊಂದಿಗೆ ಎಷ್ಟು ಡಿಗ್ರಿ ಕೋನ ಉಂಟುಮಾಡಿದೆ ಎಂದು ಕಂಡುಹಿಡಿಯಲು ಉಪಯೋಗಿಸಬೇಕಾದ ನಿಖರ ತ್ರಿಕೋನೀಯ ಅನುಪಾತ ______

A) tan$\theta$ B) sin$\theta$

C) cos$\theta$ D) cot$\theta$

5. ಒಂದು ಟವರ್ ನಿಂದ 20ಮೀ. ದೂರದ ಬಿಂದುವಿನಿಂದ ಅದರ ಮೇಲಿನ ತುದಿಗೆ ಉಂಟಾದ ಉನ್ನತ ಕೋನವು $60^\circ$ ಆದರೆ ಆ ಟವರ್ ನ ಎತ್ತರವೆಷ್ಟು ?

A) $20\sqrt{3}$ B) $20\sqrt{2}$

C) $3\sqrt{20}$ D) $\sqrt{10}$

6. ಒಂದು ಟವರ್ ನ ನೆರಳಿನ ಉದ್ದ 300ಮೀ. ಮತ್ತು ಉನ್ನತ ಕೋನವು $45^\circ$ ಆದರೆ ಟವರ್ ನ ಎತ್ತರ _____.

A) 300m B)100m

C)200m D)500m

7. ನಾವು ನಮ್ಮ ದೃಷ್ಟಿರೇಖೆಯಿಂದ ಮೇಲಿನ ವಸ್ತುವನ್ನು ನೋಡಿದಾಗ ದೃಷ್ಟಿರೇಖೆಗೂ ಮತ್ತು ಆ ವಸ್ತುವನ್ನು ಸೇರಿಸುವ ಕಾಲ್ಪನಿಕ ರೇಖೆಗಳ ನಡುವಿನ ಕೋನ _______.

A) ಉನ್ನತ ಕೋನ B) ಶೃಂಗಾಭಿಮುಖ ಕೋನ

C) ಅಂತರ್ ಕೋನ D) ಅವನತ ಕೋನ

8. ನಾವು ನಮ್ಮ ದೃಷ್ಟಿರೇಖೆಯಿಂದ ಕೆಳಗಿನ ವಸ್ತುವನ್ನು ನೋಡಿದಾಗ ದೃಷ್ಟಿರೇಖೆಗೂ ಮತ್ತು ಆ ವಸ್ತುವನ್ನು ಸೇರಿಸುವ ಕಾಲ್ಪನಿಕ ರೇಖೆಗಳ ನಡುವಿನ ಕೋನ _______.

A) ಉನ್ನತ ಕೋನ B) ಶೃಂಗಾಭಿಮುಖ ಕೋನ

C) ಅಂತರ್ ಕೋನ D) ಅವನತ ಕೋನ

9. ಒಂದು ನೇರ ಕಂಬ ಮತ್ತು ಅದರ ನೆರಳಿನ ಅನುಪಾತ (1; √3), ಆಗ ಉನ್ನತ ಕೋನವು _______.

A) $30^0$ B) $45^0$

C) $60^0$ D) $90^0$

10. ಈ ಚಿತ್ರದಲ್ಲಿ QR=10 ಆದಾಗ $\theta$ = _____.




A) $30^0$ B) $45^0$

C) $60^0$ D) $90^0$

## ಘಟಕ : ಸಂಖ್ಯಾಶಾಸ್ತ್ರ

1. ಮೊದಲ ಐದು ಸ್ವಾಭಾವಿಕ ಸಂಖ್ಯೆಗಳ ಸರಾಸರಿಯು .......

A) 2 B)3

C) 5 D) 15

2. x+3 , 2x+6 ಈ ದತ್ತಾಂಶಗಳ ಸರಾಸರಿಯು 15 ಆದರೆ X ನ ಬೆಲೆಯು...........

A) 3 B)0

C) 7 D) 9

3. ಒಂದು ಸರಣಿಯ 10 ಪಂದ್ಯಗಳಲ್ಲಿ ಒಬ್ಬ ಬ್ಯಾಟ್ಸಮನ್ ಗಳಿಸಿದ ರನ್ ಗಳು: 60,25,36,54,85 62, 95 18, 29, 75 ಆದರೆ ಇವುಗಳ ಸರಾಸರಿ .............

A)53.9 B) 62.3

C)58.5 D)63.8

4. ಮೊದಲ ಆರು ಅವಿಭಾಜ್ಯ ಸಂಖ್ಯೆಗಳ ಮಧ್ಯಾಂಕವು .........

A) 6 B)7

C)5 D)6.5

5. n ಬೆಸ ಸಂಖ್ಯೆಯಾದಾಗ ಮಧ್ಯಾಂಕವು ................ನೇ ಪ್ರಾಪ್ತಾಂಕವಾಗಿರುತ್ತದೆ.

A) n B) $\frac{n}{2}$

C) $\frac{n+1}{2}$ D) $\frac{n-1}{2}$

6. ಒಬ್ಬ ವಿದ್ಯಾರ್ಥಿಯು ಪ್ರಥಮ ಭಾಷೆಯಲ್ಲಿ 65 ಅಂಕಗಳನ್ನು , ವಿಜ್ಞಾನ ವಿಷಯದಲ್ಲಿ 50 ಅಂಕಗಳನ್ನು , ಸಮಾಜವಿಜ್ಞಾನದಲ್ಲಿ 55 ಅಂಕಗಳನ್ನು ಹಾಗೂ ಗಣಿತ ವಿಷಯದಲ್ಲಿ ಕೆಲವು ಅಂಕಗಳನ್ನು ಪಡೆದಿರುತ್ತಾನೆ. ನಾಲ್ಕು ವಿಷಯಗಳಲ್ಲಿ ಅವನು ಪಡೆದಿರುವ ಅಂಕಗಳ ಸರಾಸರಿಯು 60 ಆದರೆ ,ಗಣಿತದಲ್ಲಿ ಅವನು ಪಡೆದ ಅಂಕಗಳು ............

A)65 B) 60

C)50 D) 70

7. ಕೇಂದ್ರೀಯ ಪ್ರವೃತ್ತಿಯ ಮೂರು ಅಳತೆಗಳಿಗಿರುವ ಪ್ರಾಯೋಗಿಕ ಸಂಬಂಧವು ...........

A) 3 ಮಧ್ಯಾಂಕ=ಬಹುಲಕ+2ಸರಾಸರಿ B) 2ಸರಾಸರಿ=ಬಹುಲಕ+3ಮಧ್ಯಾಂಕ

C) 2ಮಧ್ಯಾಂಕ=2ಬಹುಲಕ+3ಸರಾಸರಿ D) ಬಹುಲಕ=3ಸರಾಸರಿ – ಮಧ್ಯಾಂಕ

8. ಈ ಕೆಳಗೆ ಕೊಟ್ಟಿರುವ ಆವೃತ್ತಿ ವಿತರಣಾ ಪಟ್ಟಿಯಲ್ಲಿ "ಮಧ್ಯಾಂಕವಿರುವ" ವರ್ಗಾಂತರವು

| ವರ್ಗಾಂತರ | 0 -10 | 10 -20 | 20 -30 | 30 -40 | 40 - 50 |
|---|---|---|---|---|---|
| ಆವೃತ್ತಿ | 5 | 8 | 12 | 15 | 20 |

A)10 – 20 B) 20 - 30

C) 30 – 40 D) 0 - 10

9. ದತ್ತಾಂಶಗಳ ಸರಾಸರಿ 3.3  ಮಧ್ಯಾಂಕ 2.4 ಆದರೆ ಅವುಗಳ ಬಹುಲಕವು .......

A) 0.4 B) 0.5

C) 0.6 D) 0.7

10. 8,12,21,42,x   ಈ ದತ್ತಾಂಶಗಳ ಸರಾಸರಿಯು  20 ಆದರೆ  X ನ ಬೆಲೆಯು...........

A) 8 B)20

C)  21 D)17

11. ಕೆಲವು ದತ್ತಾಂಶಗಳ ಸರಾಸರಿ 19 ಮತ್ತು ಮಧ್ಯಾಂಕವು 40 ಆದರೆ ಅವುಗಳ ಬಹುಲಕ .......

A) 86 B) 75

C)  30 D) 82

12.  48,50,52,54,56,58,60,62,64    ಈ ದತ್ತಾಂಶಗಳ ಮಧ್ಯಾಂಕವು  .........

A) 56 B)48

C) 64 D)50

13. 9,7,11,6,11,23,24  ಈ ಪ್ರಾಪ್ತಾಂಕಗಳ  ಬಹುಲಕವು .............

A) 9 B)7

C)11 D) 23

14. ವರ್ಗೀಕೃತ  ಪ್ರಾಪ್ತಾಂಕಗಳ  ಬಹುಲಕ ಕಂಡುಹಿಡಿಯುವ ಸೂತ್ರ  ................

A) $\frac{\sum fi\,xi}{\sum fi}$ B) L + [ $\frac{\frac{n}{2}-Cf}{f}$ ] X h

C) L + [ $\frac{f1-f0}{2f1-f0-f2}$]X h D)ಮೇಲಿನ ಎಲ್ಲವೂ

15. ವರ್ಗೀಕೃತ  ಪ್ರಾಪ್ತಾಂಕಗಳ ಅಧಿಕ ಓಜೀವ್ ಮತ್ತು ಕಡಿಮೆ ಓಜೀವ್ ನಕ್ಷೆಗಳು (30,45) ಬಿಂದುವಿನಲ್ಲಿ ಸಂಧಿಸಿದರೆ ಅವುಗಳ ಮಧ್ಯಾಂಕವು  ..............

A)75 B) 15

C)30 D)45

16.  a ,a+3, a+6, a+9, a+12     ಈ ದತ್ತಾಂಶಗಳ ಅಂಕಗಣಿತ ಸರಾಸರಿಯು 10 ಆದರೆ  a ಯ ಬೆಲೆಯು .................

A)1 B) 2

C)3 D) 4

17. ಮೊದಲ n  ಸ್ವಾಭಾವಿಕ ಸಂಖ್ಯೆಗಳ ಮೊತ್ತವು 3n/5 ಆದರೆ n  ನ ಬೆಲೆಯು.......

A) 3 B) 4

C) 1/5 D)6

18. ಕೆಲವು ದತ್ತಾಂಶಗಳ ಅಂಕಗಣಿತ ಸರಾಸರಿಯು 7.5 ಮತ್ತು $\sum f_i x_i = 120+3k$ , $\sum f_i = 30$, ಆದರೆ k ಯ ಬೆಲೆಯು ..

A) 40 B) 35

C) 50 D)45

19. x , 5 , 6 ,1 ,2 ಈ ದತ್ತಾಂಶಗಳ ಮೊತ್ತವು 24 ಆದರೆ x ಬೆಲೆಯು .........

A)4 B) 6

C) 8 D)10

20. ಒಂದು ದತ್ತಾಂಶದ ಸರಾಸರಿ ಮತ್ತು $\sum x$ ಕ್ರಮವಾಗಿ 20 ಮತ್ತು 400 ಆದರೆ ಆ ದತ್ತಾಂಶದಲ್ಲಿರುವ ಪ್ರಾಪ್ತಾಂಕಗಳ ಸಂಖ್ಯೆಯು ----------.

A)10 B) 20

C) 40 D)1600

21.ಕೆಳಗಿನ ಆವೃತ್ತಿ ವಿತರಣೆಯಲ್ಲಿ ಬಹುಲಕವಿರುವ ವರ್ಗಾಂತರದ ಕೆಳಮಿತಿಯು -------.

| ವರ್ಗಾಂತರ | 0 – 10 | 10 - 20 | 20 - 30 | 30 - 40 |
|---|---|---|---|---|
| ಆವೃತ್ತಿ | 3 | 7 | 4 | 2 |

A) 0 B)10

. C) 20 D) 30

22. ಒಂದು ವರ್ಗೀಕೃತ ದತ್ತಾಂಶದಲ್ಲಿ ಸಂಚಿತ ಆವೃತ್ತಿ ಪಟ್ಟಿಯು ಈ ಕೆಳಗಿನವುಗಳಲ್ಲಿ ಯಾವುದನ್ನು

ಪಡೆಯಲು ಉಪಯೋಗವಾಗುತ್ತದೆ

A) ಸರಾಸರಿ B) ಮಧ್ಯಾಂಕ

C)ಬಹುಲಕ D) ಮಧ್ಯಬಿಂದು

23. X ಅಕ್ಷದ ಮೇಲೆ ವರ್ಗಾಂತರದ ಮೇಲ್ಮಿತಿ , Y ಅಕ್ಷದ ಮೇಲೆ ಅನುರೂಪ ಸಂಚಿತ ಆವೃತ್ತಿಯನ್ನು ಹೊಂದಿರುವ ನಕ್ಷೆಯು -------- ಆಗಿದೆ.

A) ಕಡಿಮೆ ವಿಧಾನದ ಓಜೀವ್ B) ಅಧಿಕ ವಿಧಾನದ ಓಜೀವ್

C) ಪೈ ನಕ್ಷೆ D) ಆಯತ ನಕ್ಷೆ

24. ಸಂಚಿತ ಆವೃತ್ತಿ ನಕ್ಷೆಯನ್ನು ----------- ಎಂದು ಕರೆಯುವರು.

A)ಆಯತ ಚಿತ್ರ B) ಓಜೀವ್

C) ಸ್ತಂಭಾಲೇಖ D) ಪೈ ನಕ್ಷೆ

25. ದತ್ತ 9 ದತ್ತಾಂಶಗಳ ಮಧ್ಯಾಂಕವು 20.5 ಆಗಿದೆ. ಅವುಗಳಲ್ಲಿ 4 ದೊಡ್ಡ ಸಂಖ್ಯೆಗಳನ್ನು 2 ರಿಂದ ಹೆಚ್ಚಿಸಿದಾಗ ಬರುವ ದತ್ತಾಂಶಗಳ ಮಧ್ಯಾಂಕವು

A) 2 ಹೆಚ್ಚಾಗುವುದು B) 2 ಕಡಿಮೆಯಾಗುವುದು

C) ಮೊದಲಿನ ಮಧ್ಯಾಂಕದ 2ರಷ್ಟಾಗುವುದು D) ಮೊದಲಿನಷ್ಟೇ ಇರುವುದು

26. ದತ್ತ 100 ಪ್ರಾಪ್ತಾಂಕಗಳ ಸರಾಸರಿಯು 49 ಆಗಿದೆ. ಆದರೆ ದತ್ತಾಂಶಗಳನ್ನು ಓದುವಾಗ 60,70,80 ಕ್ಕೆ ಬದಲಾಗಿ 20,40,50 ಎಂದು ತಪ್ಪಾಗಿ ಓದಿದೆ. ಹಾಗಾದರೆ ಸರಿಯಾದ ಸರಾಸರಿಯು ------ ಆಗುವುದು.

A)49 B) 50

C) 59 D)60

27. ದತ್ತ 10 ಪ್ರಾಪ್ತಾಂಕಗಳ ಸರಾಸರಿಯು 20 ಆಗಿದೆ . ಪ್ರತಿ ದತ್ತಾಂಶದಿಂದ 5 ನ್ನು ಕಳೆದಾಗ ಸಿಗುವ ಪ್ರಾಪ್ತಾಂಕಗಳ ಸರಾಸರಿಯು ----.

A)15 B) 20

C) 25 D)40

28. ಈ ಕೆಳಗಿನ ಯಾವ ದತ್ತಾಂಶಗಳಿಗೆ ಸರಾಸರಿ, ಮಧ್ಯಾಂಕ ಮತ್ತು ಬಹುಲಕವು ಒಂದೇ ಆಗುವುದು.

A)2,2,2,2,4 B)1,3,3,3,5

C)1,1,2,5,6 D)1,1,1,2,5

29. 5,3,14,16,19,20, ಈ ಪ್ರಾಪ್ತಾಂಕಗಳ ಮಧ್ಯಾಂಕವು ----

A) 14 B) 16

C)20 D)15

30. ಈ ದತ್ತಾಂಶಗಳ ಸರಾಸರಿಯು

| ವರ್ಗಾಂತರ | 5 -15 | 15 - 25 | 25 - 35 | 35 - 45 | 45 - 55 |
|---|---|---|---|---|---|
| ಆವೃತ್ತಿ | 4 | 3 | 6 | 5 | 2 |

A)25 B)29

C)30 D) 35

# ಘಟಕ----ಮೇಲ್ಮೈ ವಿಸ್ತೀರ್ಣ ಮತ್ತು ಘನಫಲ

1. ತ್ರಿಜ್ಯ "r" ಮತ್ತು ಎತ್ತರ "h" ಹೊಂದಿರುವ ಸಿಲಿಂಡರ್ ನ ವಕ್ರ ಮೇಲ್ಮೈ ವಿಸ್ತೀರ್ಣ ಕಂಡು ಹಿಡಿಯುವ ಸೂತ್ರ.

A) $2\pi r(r+h)$ sq cm B) $2\pi rh$ sq cm

C) $\pi rl$ sq cm D) $\pi r^2$ sq cm

2. ತ್ರಿಜ್ಯ "r" ಮತ್ತು ಎತ್ತರ "h" ಹೊಂದಿರುವ ಸಿಲಿಂಡರ್ ನ ಪೂರ್ಣ ಮೇಲ್ಮೈ ವಿಸ್ತೀರ್ಣ ಕಂಡು ಹಿಡಿಯುವ ಸೂತ್ರ.

A) $2\pi r(r+h)$ B) $2\pi rh$

C) $\pi rl$ D) $\pi r^2$

3. ತ್ರಿಜ್ಯ "r" ಮತ್ತು ಎತ್ತರ "h" ಹೊಂದಿರುವ ಸಿಲಿಂಡರ್ ನ ಘನಫಲ ಕಂಡು ಹಿಡಿಯುವ ಸೂತ್ರ.

A) $2\pi r(r+h)$ B) $2\pi rh$

C) ) $1/3\ \pi r^2h$ D) $\pi r^2h$

4. ತ್ರಿಜ್ಯ "r" ಮತ್ತು ಓರೆ ಎತ್ತರ "l" ಹೊಂದಿರುವ ಶಂಕುವಿನ ವಕ್ರ ಮೇಲ್ಮೈ ವಿಸ್ತೀರ್ಣ ಕಂಡು ಹಿಡಿಯುವ ಸೂತ್ರ.

A) $\pi r(r+h)$ B) $2\pi rh$

C) $\pi rl$ D) $\pi r(r+l)$

5. ತ್ರಿಜ್ಯ "r" ಮತ್ತು ಓರೆ ಎತ್ತರ "l" ಹೊಂದಿರುವ ಶಂಕುವಿನ ಪೂರ್ಣ ಮೇಲ್ಮೈ ವಿಸ್ತೀರ್ಣ ಕಂಡು ಹಿಡಿಯುವ ಸೂತ್ರ.

A) $\pi r(r+h)$ B) $2\pi rh$

C) $\pi rl$ D) $\pi r(r+l)$

6. ತ್ರಿಜ್ಯ "r" ಮತ್ತು ಎತ್ತರ "h" ಹೊಂದಿರುವ ಶಂಕುವಿನ ಘನಫಲ ಕಂಡು ಹಿಡಿಯುವ ಸೂತ್ರ.

A) $4\pi r^2$ B) $2\pi rh$

C) ) $1/3\ \pi r^2h$ D) $\pi r^2h$

7. ತ್ರಿಜ್ಯ "r" ಹೊಂದಿರುವ ಅರ್ಧಗೋಳದ ವಕ್ರ ಮೇಲ್ಮೈ ವಿಸ್ತೀರ್ಣ ಕಂಡು ಹಿಡಿಯುವ ಸೂತ್ರ.

A) $\pi r^2$ B) $2\pi r^2$

C) ) $3\pi r^2$ D) $4\pi r^2$

8 ತ್ರಿಜ್ಯ "r" ಹೊಂದಿರುವ ಅರ್ಧಗೋಳದ ಪೂರ್ಣ ಮೇಲ್ಮೈ ವಿಸ್ತೀರ್ಣ ಕಂಡು ಹಿಡಿಯುವ ಸೂತ್ರ.

A) $\pi r^2$ B) $2\pi r^2$

C) ) $3\pi r^2$ D) $4\pi r^2$

9.ತ್ರಿಜ್ಯ "r" ಹೊಂದಿರುವ ಅರ್ಧಗೋಳದ ಘನಫಲ ಕಂಡು ಹಿಡಿಯುವ ಸೂತ್ರ.

A) $3\pi r^2$ B) $4/3\ \pi r^3$

C) $2/3\ \pi r^3$ D) $\pi r^2h$

10. ತ್ರಿಜ್ಯ "r" ಹೊಂದಿರುವ ಗೋಳದ ವಕ್ರ ಮೇಲ್ಮೈ ವಿಸ್ತೀರ್ಣ ಕಂಡು ಹಿಡಿಯುವ ಸೂತ್ರ.

A) $\pi r^2$ B) $2\pi r^2$

C) ) 3 $\pi r^2$ D) $4\pi r^2$

11. ತ್ರಿಜ್ಯ "r" ಹೊಂದಿರುವ ಗೋಳದ ಪೂರ್ಣ ಮೇಲ್ಮೈ ವಿಸ್ತೀರ್ಣ ಕಂಡು ಹಿಡಿಯುವ ಸೂತ್ರ.

A) $\pi r^2$ B) $2\pi r^2$
C) ) 3 $\pi r^2$ D) $4\pi r^2$

12 ತ್ರಿಜ್ಯ "r" ಹೊಂದಿರುವ ಗೋಳದ ಘನಫಲ ಕಂಡು ಹಿಡಿಯುವ ಸೂತ್ರ.

A) $4\pi r^2$ B) $4/3\ \pi r^3$

C) $2/3\ \pi r^3$ D) $\pi r^2 h$

13 ತ್ರಿಜ್ಯ "r" ಮತ್ತು ಓರೆ ಎತ್ತರ "l" ಹೊಂದಿರುವ ಶಂಕುವಿನ ಭಿನ್ನಕದ ವಕ್ರ ಮೇಲ್ಮೈ ವಿಸ್ತೀರ್ಣ ಕಂಡು ಹಿಡಿಯುವ ಸೂತ್ರ.

A) $\pi(r_1+r_2)\ l$ B) $\pi(r_1+r_2)\ l + \pi\ r_1^2 + \pi r_2^2$

C) $\pi rl$ D) $\pi r\ (r+l)$

14 ತ್ರಿಜ್ಯ "r" ಮತ್ತು ಓರೆ ಎತ್ತರ "l" ಹೊಂದಿರುವ ಶಂಕುವಿನ ಭಿನ್ನಕದ ಪೂರ್ಣ ಮೇಲ್ಮೈ ವಿಸ್ತೀರ್ಣ ಕಂಡು ಹಿಡಿಯುವ ಸೂತ್ರ.

A) $\pi(r_1+r_2)\ l$ B) $\pi(r_1+r_2)\ l + \pi\ r_1^2 + \pi r_2^2$

C) $\pi rl$ D) $\pi r\ (r+l)$

15 ತ್ರಿಜ್ಯ "r" ಮತ್ತು ಎತ್ತರ "h" ಹೊಂದಿರುವ ಶಂಕುವಿನ ಭಿನ್ನಕದ ಘನಫಲ ಕಂಡು ಹಿಡಿಯುವ ಸೂತ್ರ.

A) $\pi(r_1+r_2)\ l$ B) $\pi(r_1+r_2)\ l + \pi\ r_1^2 + \pi r_2^2$

C) $\pi r^2 h$ D) $1/3\pi\ h(\ r_1^2 + r_2^2 + r_1 r_2)$

16 ಶಂಕುವಿನ ಓರೆ ಎತ್ತರ "l" ತ್ರಿಜ್ಯ "r" ಮತ್ತು ಎತ್ತರ "h" ಇವುಗಳ ನಡುವಿನ ಸಂಬಂಧ.

A) $l^2 = r^2 + h^2$ B) $r^2 = l^2 + h^2$
C) $l^2 = r^2 - h^2$ D) $h^2 = r^2 + l^2$

17 ಒಂದು ಗೋಳದ ಮೇಲ್ಮೈ ವಿಸ್ತೀರ್ಣ 616 sq.m. ಆದರೆ ಅದರ ಅರ್ಧ ಗೋಳದ ಮೇಲ್ಮೈ ವಿಸ್ತೀರ್ಣ.

A) 205.6 $cm^2$ B) 308 $cm^2$
C) 1232 $cm^2$ D) 38 $cm^2$

18 ಒಂದು ಗೋಳದ ಮೇಲ್ಮೈ ವಿಸ್ತೀರ್ಣ 2464 sq.m ಆದರೆ ಅದರ ಅರ್ಧ ಗೋಳದ ಮೇಲ್ಮೈ ವಿಸ್ತೀರ್ಣ.

A) 205.6 $cm^2$ B) 308 $cm^2$

C) 1232 $cm^2$ D) 38 $cm^2$

19 ಒಂದು ಸಿಲಿಂಡರ್ ನ ಪಾದದ ಸುತ್ತಳತೆ 44 cm ಮತ್ತು ಎತ್ತರ 10 cm ಆದರೆ ಅದರ ಘನಫಲ.

A) 490 $\pi$ $cm^3$ B) 440 $\pi$ $cm^3$

C) 374 $\pi$ $cm^3$ D) 980 $\pi$ $cm^3$

20 ಮಣ್ಣಿನಿಂದ ಒಂದು ಶಂಕುವನ್ನು ತಯಾರಿಸಿ, ಚಾಕುವಿನಿಂದ ಪಾದಕ್ಕೆ ಸಮಾಂತರವಾಗಿ ಚಿಕ್ಕ ಭಾಗವನ್ನು ಕತ್ತರಿಸಿ ತೆಗೆದಾಗ ಉಳಿದ ಭಾಗವು.

A) ಸಿಲಿಂಡರ್ B) ಶಂಕು

C) ಗೋಳ D) ಶಂಕುವಿನ ಭಿನ್ನಕ

21 ಒಂದು ಸಿಲಿಂಡರ್ ನ ಪಾದದ ಸುತ್ತಳತೆ 44 cm ಮತ್ತು ಎತ್ತರ 10 cm ಆದರೆ ಅದರ ಪಾರ್ಶ್ವ ಮೇಲ್ಮೈ ವಿಸ್ತೀರ್ಣ

A) 490 $cm^2$ B) 440 $cm^2$

C) 374 $cm^2$ D) 220 $cm^2$

22 300$m^3$ ಘನಫಲ ಹೊಂದಿರುವ ಸಿಲಿಂಡರ್ ಗೆ ಸಮನಾದ ತ್ರಿಜ್ಯ ಮತ್ತು ಎತ್ತರ ಹೊಂದಿರುವ ಶಂಕುವಿನ ಘಲಫಲ.

A) 900 $m^3$ B) 600 $m^3$

C) 150 $m^3$ D) 100 $m^3$

23. 7 cm ತ್ರಿಜ್ಯ ಹೊಂದಿರುವ ಗೋಳದ ಮೇಲ್ಮೈ ವಿಸ್ತೀರ್ಣ .

A) 154$cm^2$ B)308$cm^2$

C) 616 $cm^2$ D) 770 $cm^2$

24 ತ್ರಿಜ್ಯ 14 cm ಇರುವ ಅರ್ಧ ಗೋಳದ ವಕ್ರ ಮೇಲ್ಮೈ ವಿಸ್ತೀರ್ಣ .

A) 1232 $cm^2$ B)308 $cm^2$

C) 616 $cm^2$ D) 2464 $cm^2$

25. 300 $m^3$ ಘನಫಲ ಹೊಂದಿರುವ ಶಂಕುವಿನ ತ್ರಿಜ್ಯ ಹಾಗೂ ಎತ್ತರಕ್ಕೆ ಸಮನಾದ ತ್ರಿಜ್ಯ ಹಾಗೂ ಎತ್ತರಗಳನ್ನು ಹೊಂದಿರುವ ಸಿಲಿಂಡರ್ ನ ಘನಫಲ.

A) 900 $m^3$ B) 600 $m^3$

C) 150 $m^3$ D) 100 $m^3$

26. 616 $cm^2$ ಮೇಲ್ಮೈ ವಿಸ್ತೀರ್ಣ ಹೊಂದಿರುವ ಗೋಳದ ತ್ರಿಜ್ಯವು.

A) 7 cm B) 14 cm
C)21cm D)28 cm

27. ಸಮನಾದ ತ್ರಿಜ್ಯಗಳನ್ನು ಹೊಂದಿರುವ 2 ಅರ್ಧ ಗೋಳಗಳ ಪಾದಗಳನ್ನು ಜೋಡಿಸಿದಾಗ ಉಂಟಾಗುವ ಆಕೃತಿಯ ಮೇಲ್ಮೈ ವಿಸ್ತೀರ್ಣ .

A) 3 $\pi r^2$ B) 4$\pi r^2$

C) ) 5 $\pi r^2$ D) 6$\pi r^2$

28. ಸಮನಾದ ಪಾದ ತ್ರಿಜ್ಯ ಹಾಗೂ ಎತ್ತರಗಳನ್ನು ಹೊಂದಿರುವ ಸಿಲಿಂಡರ್ ಹಾಗೂ ಶಂಕುಗಳ ಘನಫಲಗಳ ಅನುಪಾತ.

A) 2:1 B) 3:1

C) ) 2:3 D) 3:2

29.ಒಂದು ಘನವನ್ನು ಕರಗಿಸಿ ತಂತಿಯನ್ನಾಗಿಸಿದಾಗ ಕೆಳಗಿನ ಯಾವುದರ ಬೆಲೆಯು ಸ್ಥಿರವಾಗಿರುತ್ತದೆ?

A) ಉದ್ದ B) ಘನಫಲ

C) ತ್ರಿಜ್ಯ D) ಎತ್ತರ

30. 9/ π cm ಮತ್ತು 3/ π cm ವೃತ್ತಾಕಾರದ ಪಾದಗಳ ತ್ರಿಜ್ಯ ಮತ್ತು 4cm ಓರೆ ಎತ್ತರವನ್ನು ಹೊಂದಿರುವ ಶಂಕುವಿನ ಭಿನ್ನಕದ ವಕ್ರ ಮೇಲ್ಮೈ ವಿಸ್ತೀರ್ಣ .

A) 200 π $cm^2$ B)192 $cm^2$

C) 96 $cm^2$ D) 48 $cm^2$

*************************************